**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 3/2010**

**ದೋ.ಸಾ. : 57 ಪ್ರಾ.ಸಾ. : 23**

ಸಾಕ್ಷಿಯ ಹೆಸರು : ಕರಿಯ ನಾಗ ಕುರಬರ
ತಂದೆಯ ಹೆಸರು : ನಾಗ ಕುರಬರ
ವಯಸ್ಸು : 76 ವರ್ಷ
ಉದ್ಯೋಗ : ರೈತಾಪಿ
ವಾಸ : ಸಿದ್ದಾಪುರ.

**ದಿನಾಂಕಃ 07-06-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಖಾನಗೋಡು ಗ್ರಾಮದಲ್ಲಿ ನಾನು ಶಾಲೆಗೆ ಹೋಗುವಾಗ ಸಣ್ಣವನಿದ್ದಾಗ ವಾಸವಿದ್ದೆ ನಂತರ ಅಲ್ಲಿ ಬಿಟ್ಟು ಹಳ್ಳಿಬೈಲು ಗ್ರಾಮದಲ್ಲಿ 1980 ರಿಂದ ವಾಸವಿದ್ದೇನೆ. ನನಗೆ ಆರೋಪಿಯ ಪರಿಚಯ 40 ವರ್ಷಗಳಿಂದ ಇದೆ. ಆರೋಪಿ ಖಾನಗೋಡು ಗ್ರಾಮ ಪಂಚಾಯತಿಯ ಮಾಜಿ ಅಧ್ಯಕ್ಷ ಆಗಿರುತ್ತಾನೆ. ಖಾನಗೋಡು ಗ್ರಾಮ ಪಂಚಾಯತಿಯಿಂದ ಸದರಿ ಗ್ರಾಮದಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ಗ್ರಾಮಸ್ಥರಿಗೆ ಶೌಚಾಲಯ ನಿರ್ಮಿಸಿ ಕೊಡಲು ತಲಾ ರೂ.3000/- ಸಹಾಯಧನ ಕೊಡುತ್ತಿದ್ದ ವಿಚಾರ ನನಗೆ ಗೊತ್ತಿಲ್ಲ. ನನಗೆ ಆ ರೀತಿ ರೂ.3000/- ನ್ನು ಸದರಿ ಯೋಜನೆಯಡಿಯಲ್ಲಿ ಕೊಟ್ಟಿಲ್ಲ. ನಾನು ಸದರಿ ಯೋಜನೆಯಲ್ಲಿ ಫಲಾನುಭವಿ ಆಗಿರಲಿಲ್ಲ. ಪೊಲೀಸ ನವರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ವಿಶೇಷ ಸರಕಾರಿ ಅಭಿಯೋಜಕರಿಂದ**

2. 2001-02 ಸಾಲಿನಲ್ಲಿ ಸ್ವಚ್ಛ ಗ್ರಾಮ ಯೋಜನೆಯಡಿಯಲ್ಲಿ ನಾನು ಫಲಾನುಭವಿ ಆಗಿ ಖಾನಗೋಡು ಗ್ರಾಮದಲ್ಲಿ ಆಯ್ಕೆ ಆಗಿದ್ದೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸ

ನವರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸಂರಿಲ್ಲ. ಆ ಯೋಜನೆಯಡಿಯಲ್ಲಿ ನಮ್ಮ ಗ್ರಾಮಕ್ಕೆ ರೂ.20,00,000/- ಮಂಜೂರು ಆಗಿದೆ ಎಂದು ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಿಪಿ-59 ರಂತೆ ನಾನು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನಗೆ ಬಹಳ ವರ್ಷ ಪರಿಚಯ ಇದ್ದರಿಂದ ಅವನಿಗೆ ಸಹಾಯ ಮಾಡಲೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಜಿ ಟಿ ಎನ್ ರವರಿಂದ</u>**

ಹೆಚ್ ಎಮ್ ಜಿ ರವರು ಜಿ ಟಿ ಎನ್ ಪರವಾಗಿ ಆರೋಪಿ ಪರ ಪಾಟಿ ಸವಾಲು ಇಲ್ಲಾ ಎಂದು ಹೇಳಿದ್ದಾರೆ.

**<u>ಮರು ವಿಚಾರಣೆಃ – ಇಲ್ಲ –</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ